## ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (IFA)
## ಆರ್ಕೈವ್ಸ್ ಮತ್ತು ಮ್ಯೂಸಿಯಂ ಕಾರ್ಯಕ್ರಮದಡಿಯಲ್ಲಿ
## ರಾಣಿ ಅಬ್ಬಕ್ಕ ತುಳು ಮ್ಯೂಸಿಯಂ, ಬಂಟ್ವಾಳ
## ಸಹಯೋಗದೊಂದಿಗೆ

## ಐಎಫ್‌ಎ-ರಾಣಿ ಅಬ್ಬಕ್ಕ ತುಳು ಮ್ಯೂಸಿಯಂ ಸ್ಕಾಲರ್ಲಿ (ವಿದ್ವತ್ಪೂರ್ಣ) ಅಂಡ್ ಕ್ರಿಯೇಟಿವ್ (ಮತ್ತು ಸೃಜನಶೀಲ) ಪ್ರಾಜೆಕ್ಟ್‌ಗಳ ಅರ್ಜಿಗಳನ್ನು ಆಹ್ವಾನಿಸುತ್ತದೆ

## ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜನವರಿ 10, 2025

ಐಎಫ್‌ಎ ಸಂಸ್ಥೆಯು ತನ್ನ ಆರ್ಕೈವ್ಸ್ ಮತ್ತು ಮ್ಯೂಸಿಯಂ ಕಾರ್ಯಕ್ರಮದಡಿಯಲ್ಲಿ ರಾಣಿ ಅಬ್ಬಕ್ಕ ತುಳು ಮ್ಯೂಸಿಯಂ ಸಹಯೋಗದೊಂದಿಗೆ **ಐಎಫ್‌ಎ-ರಾಣಿ ಅಬ್ಬಕ್ಕ ತುಳು ಮ್ಯೂಸಿಯಂ ಸ್ಕಾಲರ್‌ಲಿ (ವಿದ್ವತ್ಪೂರ್ಣ) ಅಂಡ್ ಕ್ರಿಯೇಟಿವ್ (ಮತ್ತು ಸೃಜನಶೀಲ) ಪ್ರಾಜೆಕ್ಟ್‌ಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತದೆ.** ಈ ಕಾರ್ಯಕ್ರಮವು ಎರಡು ಉದ್ದೇಶಗಳನ್ನು ಒಳಗೊಂಡಿದೆ. ಆರ್ಟ್ಸ್ ಪ್ರಾಕ್ಟೀಷನರ್ಸ್ ಮತ್ತು ರಿಸರ್ಚರ್ಗಳಿಗೆ ಆರ್ಕೈವ್ಸ್ ಮತ್ತು ಮ್ಯೂಸಿಯಂ ಸಂಗ್ರಹಗಳ ಪರಿಚಯದೊಂದಿಗೆ, ಇವುಗಳ ವಿಮರ್ಶಾತ್ಮಕ, ಸೃಜನಾತ್ಮಕ ಹಾಗೂ ಹೊಸದೃಷ್ಟಿಯ ಅಧ್ಯಯನಕ್ಕೆ ಅವಕಾಶದ ಜೊತೆಗೆ ಸಾರ್ವಜನಿಕ ತೊಡಗಿಸಿಕೊಳ್ಳುವಿಕೆಗೆ ಅನುವು ಒದಗಿಸುವುದು; ಮತ್ತು ಈ ಮುಖಾಂತರ ಸಂವಾದ ಮತ್ತು ಚರ್ಚೆಗಳಿಗೆ ವೇದಿಕೆಯನ್ನಾಗಿಸುವುದು. ಈ ಕಾರ್ಯಕ್ರಮದ ಅಡಿಯಲ್ಲಿ ಹಿಂದಿನ ಪ್ರಾಜೆಕ್ಟ್‌ಗಳ ಬಗ್ಗೆ ಓದಿ.

**ಕೊನೆಯ ದಿನಾಂಕ: ಜನವರಿ 10, 2025**

ಇಂಗ್ಲಿಷ್ ಭಾಷೆಯಲ್ಲಿ ಓದಲು ಇಲ್ಲಿ ಕ್ಲಿಕ್ ಮಾಡಿ.

**ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ಕುರಿತು:**

ಕರ್ನಾಟಕದ ಬಂಟ್ವಾಳದಲ್ಲಿ ಇರುವ ರಾಣಿ ಅಬ್ಬಕ್ಕ ತುಳು ಮ್ಯೂಸಿಯಂ, ತುಳುನಾಡಿನ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಲು ಮತ್ತು ಪ್ರದರ್ಶಿಸಲು ಮುಡಿಪಾಗಿಡಲಾಗಿದೆ. ಪೋರ್ಚುಗೀಸ್ ವಸಾಹತುಶಾಹಿಗಳ ವಿರುದ್ಧ ಹೋರಾಡಿದ ಧೀಮಂತ ರಾಣಿ ಅಬ್ಬಕ್ಕನ ಹೆಸರಿನಲ್ಲಿ ಈ ಮ್ಯೂಸಿಯಂ ಸ್ಥಾಪಿತವಾಗಿದೆ. ಇದು ಅವರ ಕೀರ್ತಿಗೆ ಮತ್ತು ತುಳುನಾಡಿನ ಶ್ರೀಮಂತ ಇತಿಹಾಸಕ್ಕೆ ಗೌರವ ಸಮರ್ಪಣೆಯಾಗಿದೆ.

ನಿವೃತ್ತ ಇತಿಹಾಸ ಪ್ರಾಧ್ಯಾಪಕ ಡಾ. ತುಕಾರಾಮ ಪೂಜಾರಿ ಸ್ಥಾಪಿಸಿ ನಿರ್ವಹಿಸುತ್ತಿರುವ ಈ ಮ್ಯೂಸಿಯಂ, ತುಳುನಾಡಿನ ಐತಿಹಾಸಿಕ ಕಥನವನ್ನು ಸಾರುವ ವಸ್ತುಗಳ ವಿಶಾಲ ಸಂಗ್ರಹವನ್ನು ಮತ್ತು ಐತಿಹಾಸಿಕ ಅವಶೇಷಗಳನ್ನು ಹೊಂದಿದೆ. ಈ ಮ್ಯೂಸಿಯಂನಲ್ಲಿ ಕಲಾಕೃತಿಗಳ ಜೊತೆಗೆ, ಎಸ್. ಯು. ಪಣಿಯಾಡಿ ಅವರ ಹೆಸರಿನ ಗ್ರಂಥಾಲಯ, ನಾಣ್ಯ ಸಂಗ್ರಹಣಾ

ವಿಭಾಗ ಮತ್ತು ರಾಣಿ ಅಬ್ಬಕ್ಕನ ಸ್ಮರಣಾರ್ಥ ಕಲಾ ಗ್ಯಾಲರಿ ಇದೆ. ತುಳು ನಾಡಿನ ವಿಶಿಷ್ಟ ಸಂಪ್ರದಾಯಗಳು, ಕಲಾ ರೂಪಗಳು, ಜಾನಪದ ಕಲೆಗಳು, ಮತ್ತು ಇತಿಹಾಸದ ಬಗ್ಗೆ ಸಂದರ್ಶಕರಿಗೆ ಅರಿವು ಮೂಡಿಸುವ ಗುರಿಯನ್ನು ಈ ಮ್ಯೂಸಿಯಂ ಹೊಂದಿದ್ದು, ನಮ್ಮ ಸಾಂಸ್ಕೃತಿಕ ಬೇರುಗಳೆಡೆಗಿನ ಆಳವಾದ ಒಳನೋಟವನ್ನು ಸಾದರ ಪಡಿಸುತ್ತಿದೆ.

**ವಸ್ತುಸಂಗ್ರಹಾಲಯದ ಕುರಿತು:**

ಈ ಸಂಸ್ಥೆಯು ಮೌಖಿಕ ಇತಿಹಾಸ, ಭೌತಿಕ ಸಂಸ್ಕೃತಿ, ಪ್ರದರ್ಶನ ಕಲೆ, ಸಾಮಾಜಿಕ ಮತ್ತು ಧಾರ್ಮಿಕ ಚರಿತ್ರೆಯ ಅಧ್ಯಯನಕ್ಕೆ ಒತ್ತು ನೀಡುವ ಮೂಲಕ ಪ್ರಾದೇಶಿಕ ಇತಿಹಾಸವನ್ನು ಕಟ್ಟುವ ಕಾರ್ಯದಲ್ಲಿ ಪ್ರಸಿದ್ಧವಾಗಿದೆ. ಇಲ್ಲಿನ ಸಂಗ್ರಹಾಲಯದಲ್ಲಿ ಹಲವಾರು ಸಾಂಪ್ರದಾಯಿಕ ಆಚರಣೆಗಳಿಗೆ ಸಂಭಂದಿಸಿದ ವಸ್ತುಗಳು ಮತ್ತು ಶಿಲ್ಪಗಳನ್ನು ಒಳಗೊಂಡಿದೆಯಲ್ಲದೆ, ಈ ಆಚರಣೆಗಳ ಗಹನ ಸಾಂಸ್ಕೃತಿಕ ಮಹತ್ವವನ್ನು ಪ್ರತಿಬಿಂಬಿಸುತ್ತದೆ.

ಈ ಸಂಗ್ರಹಾಲಯದ ವಸ್ತು ವಿಶೇಷಗಳಲ್ಲಿ ತುಳುನಾಡಿನಲ್ಲಿ ಆರಾಧಿಸಲ್ಪಡುವ ದೈವಗಳಿಗೆ ಸಂಬಂಧಿಸಿದ ಪರಿಕರಗಳಿವೆ. ಇವುಗಳು ಈ ಪ್ರದೇಶದ ಆರಾಧನಾ ಪರಂಪರೆಯ ಆಳವಾದ ಅರಿವನ್ನು ಒದಗಿಸುತ್ತದೆ.  ಇಲ್ಲಿರುವ ಸಾಂಪ್ರದಾಯಿಕ ಕೃಷಿ ಸಾಧನಗಳು ಇಲ್ಲಿನ ಕೃಷಿ ಸಂಸ್ಕೃತಿಯ ಬದಲಾದ ಸ್ಥಿತಿಯನ್ನು ಬಿಂಬಿಸಿದರೆ, ಅಡುಗೆ ಸಲಕರಣೆಗಳಿಂದ ಹಿಡಿದು ದಿನನಿತ್ಯ ಬಳಸುವ ವಸ್ತುಗಳವರೆಗೆ ಆದ ಬದಲಾವಣೆಯ ಸ್ಪಷ್ಟ ಸುಳುಹನ್ನು ನೀಡುತ್ತವೆ.

ಈ ಸಹಯೋಗದಡಿಯಲ್ಲಿ ಹಮ್ಮಿಕೊಳ್ಳುವ ಪ್ರಾಜೆಕ್ಟ್‌ಗಳಿಗೆ ಮ್ಯೂಸಿಯಂನ ಎಲ್ಲಾ ಸಂಗ್ರಹಗಳು ಅಧ್ಯಯನಕ್ಕೆಲಭ್ಯವಿರುತ್ತದೆ.

**ಐಎಫ್‌ಎ-ರಾಣಿ ಅಬ್ಬಕ್ಕ ತುಳು ಮ್ಯೂಸಿಯಂ ಸ್ಕಾಲರ್‌ಲಿ ಮತ್ತು ಕ್ರಿಯೇಟಿವ್ ಪ್ರಾಜೆಕ್ಟ್‌ಗಳ ವ್ಯಾಪ್ತಿಯ ಕುರಿತು:**

ನಾವು ಅಂತರ್‌ಶಿಸ್ತೀಯ ಮತ್ತು ಸಹಯೋಗಾತ್ಮಕ ವಿಧಾನಗಳ ಮೂಲಕ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಒಳಗೊಂಡಿರುವ ಪ್ರಾಜೆಕ್ಟ್‌ಗಳನ್ನು ಪ್ರೋತ್ಸಾಹಿಸುತ್ತೇವೆ. ಅರ್ಜಿದಾರರು ಮ್ಯೂಸಿಯಂನ ಸಂಪೂರ್ಣ ಸಂಗ್ರಹವನ್ನು ಆಧರಿಸಿ ಪ್ರಾಜೆಕ್ಟ್‌ಅನ್ನು ರೂಪಿಸಬಹುದು ಅಥವಾ ಮ್ಯೂಸಿಯಂನ ಪ್ರಮುಖ ಅಂಶಗಳಲ್ಲಿ ಯಾವುದಾದರೂ ಒಂದು ಅಂಶವನ್ನು ಇಟ್ಟುಕೊಂಡು ಕೂಡ ಪ್ರಾಜೆಕ್ಟ್ ರೂಪಿಸಬಹುದು.

**ಸ್ಕಾಲರ್‌ಲಿ ಪ್ರಾಜೆಕ್ಟ್‌ಗಳಿಗಾಗಿ,** ಮ್ಯೂಸಿಯಂನ ಸಂಗ್ರಹವನ್ನು ಸಂಶೋಧನಾತ್ಮವಾಗಿ ಹಾಗೂ ವಿಮರ್ಶಾತ್ಮಕವಾಗಿ ತಮ್ಮ ಪ್ರಾಜೆಕ್ಟ್‌ಗಳಲ್ಲಿ ತೊಡಗಿಸಿಕೊಳ್ಳುವ ಪ್ರಸ್ತಾವನೆಗಳನ್ನು ನಾವು ಪ್ರೋತ್ಸಾಹಿಸುತ್ತೇವೆ. ಫೋಟೋಗಳನ್ನು ಒಳಗೊಂಡ ಡಿಜಿಟಲ್ ಅಡಕಗಳು, ಮೊನೋಗ್ರಾಫ್‌ಗಳು, ಪ್ರಬಂಧಗಳು, ಸಂಶೋಧನಾ ಆಧಾರಿತ ಸಮಗ್ರ ಮತ್ತು ಸಚಿತ್ರ ಕ್ಯಾಟಲಾಗ್ ಮುಂತಾದ ಸ್ಪಷ್ಟ ಫಲಿತಾಂಶಗಳ ಮೂಲಕ ಸಂಸ್ಥೆಯ ಜ್ಞಾನಭಂಡಾರಕ್ಕೆ ಪೂರಕವಾದ ವಿಷಯಗಳನ್ನು ರಚಿಸಬಹುದು ಮತ್ತು ಆನ್‌ಲೈನ್ ಮತ್ತು ಆಫ್‌ಲೈನ್ ಸಾರ್ವಜನಿಕ ಕಾರ್ಯಕ್ರಮಗಳ ಮೂಲಕ ತಮ್ಮ ಸಂಶೋಧನೆಯನ್ನು/ ಪ್ರಬಂಧಗಳನ್ನು ಪ್ರಸ್ತುತಪಡಿಸಬಹುದು.

**ಕ್ರಿಯೇಟಿವ್ ಪ್ರಾಜೆಕ್ಟ್‌ಗಳಿಗಾಗಿ,** ಮ್ಯೂಸಿಯಂನ ಸಂಗ್ರಹವನ್ನು ಕ್ಯೂರೇಟರ್ ಮತ್ತು ಕಲಾತ್ಮಕ ರೀತಿಗಳಿಂದ ಹೊಸ ದೃಷ್ಟಿಕೋನದಲ್ಲಿ ಪುನರ್‌ಕಲ್ಪಿಸುವ ಪ್ರಸ್ತಾವನೆಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಇದರಲ್ಲಿ ದೃಶ್ಯ ಶ್ರಾವ್ಯ ದಾಖಲೀಕರಣ, ಮ್ಯೂಸಿಯಂ ವಸ್ತುಗಳನ್ನು ಆಧರಿಸಿದ ಮೌಖಿಕ ಇತಿಹಾಸದ ದಾಖಲೀಕರಣ, ತುಳುನಾಡು ಮತ್ತು ರಾಣಿ ಅಬ್ಬಕ್ಕನ ಇತಿಹಾಸವನ್ನು ಒಳಗೊಂಡಿರುವ ಸಂಗ್ರಹವನ್ನು ರಚಿಸುವುದು ಸೇರಿದಂತೆ **ಸಂಗ್ರಹದ ವಸ್ತುಗಳ ಮೂಲಕ ಇತಿಹಾಸದ ಹೊಸ ಒಳನೋಟವನ್ನು ಕಟ್ಟಿಕೊಡಬಹುದು.** ಈ ಪ್ರಾಜೆಕ್ಟ್‌ಗಳು ಪಾಡ್‌ಕಾಸ್ಟ್‌ಗಳು, ಅನಿಮೇಷನ್ ಚಲನಚಿತ್ರಗಳು, ಕಾರ್ಯಾಗಾರಗಳು, ಪ್ರದರ್ಶನಗಳು ಮುಂತಾದವುಗಳ ಮೂಲಕ ಸಾರ್ವಜನಿಕ ಸಹಭಾಗಿತ್ವಕ್ಕೆ ಸಹಾಯಕವಾಗಿ ರಚಿಸಬಹುದು.

ದಯವಿಟ್ಟು ಗಮನಿಸಿ ಈ ಫಲಿತಾಂಶಗಳು ಕೇವಲ ಸಲಹೆಗಳಾಗಿದ್ದು, ಸಂಶೋಧಕರ ಆಸಕ್ತಿಗೆ ತಕ್ಕಂತೆ ವಿಭಿನ್ನ ಹಾಗೂ ವಿಶಿಷ್ಟ ಫಲಿತಾಂಶಗಳನ್ನು ನಾವು ನಿರೀಕ್ಷಿಸುತ್ತೇವೆ.

ಸ್ಕಾಲರ್‌ಲಿ ಮತ್ತು ಕ್ರಿಯೇಟಿವ್ ಪ್ರಾಜೆಕ್ಟ್‌ಗಳಲ್ಲಿ ಕಾರ್ಯನಿರ್ವಹಿಸುವ ಪ್ರಾಜೆಕ್ಟ್ ಸಂಯೋಜಕರು, ಕರ್ನಾಟಕದ ಬಂಟ್ವಾಳದಲ್ಲಿ ಇರುವ ಈ ಮ್ಯೂಸಿಯಂಗೆ ಖುದ್ದಾಗಿ ಭೇಟಿ ನೀಡಿ, ಸಂಗ್ರಹಗಳನ್ನು ಅಧ್ಯಯನ ಮತ್ತು ಸಂಶೋಧನೆ ಮಾಡುವುದು ಅಗತ್ಯವಾಗಿದೆ. ಪ್ರಾಜೆಕ್ಟ್ ಸಂಯೋಜಕರು ಪ್ರಾಜೆಕ್ಟ್‌ನ ಅವಧಿಯಲ್ಲಿ ಮ್ಯೂಸಿಯಂನ ಈ ಮೇಲಿನ ನಿರ್ದಿಷ್ಟ ವಸ್ತುಗಳನ್ನು ಬಳಸಲು ಅನುಮತಿ ನೀಡಲಾಗುವುದು. ಕನ್ನಡ ಮತ್ತು ತುಳು ಭಾಷೆಗಳ ಜ್ಞಾನ ಹೊಂದಿದ್ದು, ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ಕೆಲಸ ಮಾಡಲು ಉತ್ಸುಕರಾಗಿರುವ ಅರ್ಜಿದಾರರು ಅರ್ಜಿ ಸಲ್ಲಿಸಬಹುದಾಗಿದೆ.

ಸಂಶೋಧನೆಗೆ ಲಭ್ಯವಿರುವ ವಸ್ತುಗಳು ಮತ್ತು ಸಂಗ್ರಹದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **ಡಾ. ತುಕಾರಾಮ ಪೂಜಾರಿ** ಅವರನ್ನು 9449165762ಗೆ ಮತ್ತು **ಸಿಂಧೂರ ಟಿಪಿ** ಅವರನ್ನು 8105832789ಗೆ ಸಂಪರ್ಕಿಸಿ ಅಥವಾ tpsindhura@gmail.com ಗೆ ಇಮೇಲ್ ಕಳುಹಿಸಿ.

**ಪ್ರಾಜೆಕ್ಟ್ ಅವಧಿ:** ಎರಡೂ ರೀತಿಯ ಪ್ರಾಜೆಕ್ಟ್‌ಗಳು 15 ತಿಂಗಳ ಅವಧಿಗೆ ಪರಿಗಣಿಸಲ್ಪಟ್ಟಿವೆ.

**ಅರ್ಜಿದಾರರ ಪ್ರೊಫೈಲ್:**

• ಕ್ಯೂರೇಟರ್‌ಗಳು, ಕಲಾವಿದರು, ಕಲಾ ಶಿಕ್ಷಕರು, ಸಂಶೋಧಕರು, ಲೇಖಕರು, ಇತರ ಸೃಜನಾತ್ಮಕ ಪ್ರಾಕ್ಟಿಷನರ್ಸ್ ಗಳು ಮತ್ತು ಸಂಶೋಧನೆಯ ಹಿನ್ನೆಲೆ ಹೊಂದಿದ್ದು, ಮ್ಯೂಸಿಯಂ ಸಂಗ್ರಹದೊಂದಿಗೆ ಕೆಲಸ ಮಾಡಲು ಆಸಕ್ತಿಯುಳ್ಳವರಿಂದ ಅರ್ಜಿಗಳನ್ನು ನಾವು ಆಹ್ವಾನಿಸುತ್ತೇವೆ.

• ಅರ್ಜಿಯನ್ನು ಕೇವಲ ಭಾರತೀಯ ನಾಗರಿಕರು ಸಲ್ಲಿಸಬಹುದು. ನಮ್ಮ ಅರ್ಹತಾ ಮಾನದಂಡಗಳ ಬಗ್ಗೆ ತಿಳಿಯಲು ಇಲ್ಲಿ ಕ್ಲಿಕ್ ಮಾಡಿ.

**ಬಜೆಟ್:**

•ಪ್ರಾಜೆಕ್ಟ್ ವೆಚ್ಚವು ರೂ. 3,00,000/- ಅನ್ನು ಮೀರಬಾರದು.

•ಪ್ರಾಜೆಕ್ಟ್ ಸಂಪೂರ್ಣ ಅವಧಿಗೆ ಸೂಚಿತ ಬಜೆಟ್‌ನ 35% ಅನ್ನು ಮೀರದಷ್ಟು ಗೌರವಧನವನ್ನು ನಿರೀಕ್ಷಿಸಬಹುದು. ಬಜೆಟ್‌ನ ಒಟ್ಟು ಮೊತ್ತವು ಗೌರವಧನವನ್ನು ಒಳಗೊಂಡಿರುತ್ತದೆ.

ಅನುದಾನವು ಕೇವಲ ಪ್ರಾಜೆಕ್ಟ್ ಸಂಭಂದಿತ ವೆಚ್ಚಗಳು ಮತ್ತು ಚಟುವಟಿಕೆಗಳಿಗೆ ಸೀಮಿತವಾಗಿರುತ್ತದೆ. ಈ ಅನುದಾನದಲ್ಲಿ ಮೂಲಸೌಕರ್ಯ ವೆಚ್ಚಗಳು ಅಥವಾ ಉಪಕರಣಗಳ ಖರೀದಿಗೆ ಅವಕಾಶವಿರುವುದಿಲ್ಲ.

**ಪ್ರಸ್ತಾವನೆಗಳನ್ನು ಸಲ್ಲಿಸಲು ಮಾರ್ಗಸೂಚಿಗಳು:**

ಕೆಳಗಿನ ಮಾಹಿತಿಯನ್ನು ಒಂದೇ ಇಮೇಲ್‌ನಲ್ಲಿ ಕಳುಹಿಸಿ:

ಈ ಮೇಲೆ ಉಲ್ಲೇಖಿಸಿರುವ ದೃಶ್ಯ ಮತ್ತು ಪಠ್ಯ ವಸ್ತುಗಳಿಂದ ಅಭಿವೃದ್ಧಿಪಡಿಸಬಹುದಾದ ಪ್ರಾಜೆಕ್ಟ್‌ಅನ್ನು ಸಂಕ್ಷಿಪ್ತವಾಗಿ ವಿವರಿಸುವ ಪ್ರಸ್ತಾವನೆ. (ಈ ಪ್ರಸ್ತಾವನಾ ಆಹ್ವಾನದಲ್ಲಿ ವಿವರಿಸಿರುವಂತೆ ಪ್ರಸ್ತಾವನೆಯು ನಿರೀಕ್ಷಿಸಬಹುದಾದ ಸೃಜನಶೀಲ ಫಲಿತಾಂಶಗಳನ್ನು ಒಳಗೊಂಡಿರಬೇಕು. ಸ್ಕಾಲರ್‌ಲಿ ಪ್ರಾಜೆಕ್ಟ್ ಆಗಿದ್ದಲ್ಲಿ ಸಂಶೋಧನಾ ಪ್ರಶ್ನೆಗಳನ್ನು ಒಳಗೊಂಡಿರಬೇಕು) ಈ ವಿವರಣೆಯು ದೃಷ್ಟಿಕೋನ, ವಿಧಾನ ಮತ್ತು ಫಲಿತಾಂಶಗಳನ್ನು ಹೊಂದಿರಬೇಕು.

● ಈ ಪ್ರಾಜೆಕ್ಟ್ ಅಂಶಗಳಿಂದ ಅಭಿವೃದ್ಧಿಪಡಿಸಬಹುದಾದ ಇತರ ಸಾರ್ವಜನಿಕ ಕಾರ್ಯಕ್ರಮಗಳ ಬಗ್ಗೆ ಒಂದು ಚಿಕ್ಕ ಟಿಪ್ಪಣಿ.

● ಪ್ರಾಜೆಕ್ಟ್ ಅವಧಿಯ ವಿವರಗಳು

● ಬಜೆಟ್‌ನ ವಿವರಗಳು

● ನೀವು ಕ್ಯೂರೇಟರ್, ಆರ್ಟ್ ಪ್ರಾಕ್ಟೀಸನರ್ ಅಥವಾ ರಿಸರ್ಚರ್ ಆಗಿ ಭಾಗವಹಿಸಿದ್ದ ಹಿಂದಿನ ಯಾವುದಾದರೂ ಪ್ರಾಜೆಕ್ಟ್‌ನ ಸಣ್ಣ ವಿವರಣೆಯೊಂದಿಗೆ ನಿಮ್ಮ ವ್ಯಕ್ತಿ ಪರಿಚಯವನ್ನು ಕಳುಹಿಸಿ. ಆ ಪ್ರಾಜೆಕ್ಟ್‌ನ ದೃಷ್ಟಿಕೋನ, ಪ್ರಕ್ರಿಯೆಗಳು, ಮತ್ತು ಫಲಿತಾಂಶಗಳು ಈ ವಿವರಣೆಯಲ್ಲಿ ಒಳಗೊಂಡಿರಬೇಕು. ದಯವಿಟ್ಟು ದಾಖಲೆಗಳನ್ನು ಲಗತ್ತಿಸಬೇಡಿ ಬದಲಾಗಿ ಅವುಗಳ ಲಿಂಕ್‌ಗಳನ್ನು ಮಾತ್ರ ಕಳುಹಿಸಿಕೊಡಿ.

● ನಿಮ್ಮ ಪ್ರಸ್ತಾವನೆಯನ್ನು ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ಬರೆಯಬಹುದು.

ನಿಮ್ಮ ಅರ್ಜಿಗಳನ್ನು ಅಥವಾ ಯಾವುದೇ ಪ್ರಶ್ನೆಗಳನ್ನು ರಿತ್ವಿಕಾ ಮಿಶ್ರಾ ritwika@indiaifa.org ಗೆ Application for IFA-Rani Abbakka Tulu Museum Project ಎಂಬ ವಿಷಯದೊಂದಿಗೆ ಇಮೇಲ್ ಮಾಡಿ.

ಪ್ರಮುಖ ದಿನಾಂಕಗಳು:

- ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಜನವರಿ 10, 2025
- ಆಯ್ದ ಅಭ್ಯರ್ಥಿಗಳ ಸಂದರ್ಶನಗಳು 2025 ಫೆಬ್ರುವರಿಯಲ್ಲಿ ನಡೆಯುವ ಸಾಧ್ಯತೆಯಿದೆ
- ಆಯ್ಕೆಯಾದ ಪ್ರಾಜೆಕ್ಟ್ ಗಳು 2025 ಫೆಬ್ರುವರಿಯಿಂದ ಪ್ರಾರಂಭವಾಗಿ 15 ತಿಂಗಳ ಅವಧಿಗೆ ಮುಕ್ತಾಯಗೊಳ್ಳಲಿದೆ.

IFA ನೇರವಾಗಿ ನಿಮ್ಮೊಂದಿಗೆ ಈ ಪ್ರಾಜೆಕ್ಟ್ ಗಳನ್ನು ಕಾರ್ಯಗತಗೊಳಿಸುತ್ತದೆ.

*IFA, ಮಕ್ಕಳನ್ನು ಒಳಗೊಂಡಂತೆ ಪ್ರತಿಯೊಬ್ಬರಿಗೂ ಬೆಂಬಲ, ಗೌರವ ಮತ್ತು ರಕ್ಷಣೆ ನೀಡುವ ಸುರಕ್ಷಿತ ಪರಿಸರವನ್ನು ನಿರ್ಮಿಸಲು ಬದ್ಧವಾಗಿದೆ . ಅರ್ಜಿದಾರರು ಕೂಡ ಈ ನಿಲುವಿಗೆ ಬದ್ಧರಾಗಿರಬೇಕು ಮತ್ತು ಯಾವಾಗಲೂ ಈ ಮೌಲ್ಯವನ್ನು ಎತ್ತಿ ಹಿಡಿಯಬೇಕು.*

ನಮ್ಮ ಹಾರ್ದಿಕ ಅಭಿನಂದನೆಗಳು,

IFA ತಂಡ